# ಮಣ್ಣು ಮಣ್ಣೆಂದರೆ

ಎಲ್ಲ ಋತುಗಳಲ್ಲೂ ಅನ್ನ ನೀಡುವ ಭೂಮಿತಾಯಿಯ ಆರಾಧನೆ ಕೃಷಿ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಜಗತ್ತಿನ ಎಲ್ಲ ಕೃಷಿ ಸಂಸ್ಕೃತಿಗಳಲ್ಲೂ ಭೂಮಿಗೆ ಸಂಬಂಧಿಸಿದ ಆಚರಣೆಗಳು ಪ್ರಕೃತಿ ಮತ್ತು ಮನುಕುಲದ ನಡುವಿನ ಸಾಮರಸ್ಯದ ಅಭಿವ್ಯಕ್ತಿಯಂತಿವೆ. ಕೃಷಿಯಲ್ಲಿ ಭೂಮಿಯನ್ನು ಹೆಣ್ಣೆಂದೇ ಭಾವಿಸಿ ಪೂಜಿಸುವ ಸಂಪ್ರದಾಯವಿದೆ. 'ಹೆಣ್ಣು ಪ್ರಕೃತಿ ಮತ್ತು ಸಮೃದ್ಧಿಯ ಸ್ವರೂಪಳು' ಆದ್ದರಿಂದಲೇ ಹೆಣ್ಣನ್ನು ಪೂಜಿಸುವ ಸ್ವರೂಪದಲ್ಲೇ ಭೂಮಿಯನ್ನು ಪೂಜಿಸುವುದು ಎಲ್ಲೆಡೆಯೂ ಇದೆ. ಹರಪ್ಪ ನಾಗರಿಕತೆಯ ಕಾಲದಲ್ಲಿ ಸಸ್ಯಾಲಂಕಾರಿ ಶೋಭಿತೆಯಾದ 'ಶಾಕಂಭರಿ'ಯ ರೂಪದಲ್ಲಿ ಸರ್ವಸೃಷ್ಟಿಯ ಹೆಣ್ಣನ್ನು ಆರಾಧಿಸುತ್ತಿದ್ದರು ಎಂದು ಇತಿಹಾಸಕಾರರು ಹೇಳುತ್ತಾರೆ.

ಕೃಷಿ ಸಂಸ್ಕೃತಿ ಎನ್ನುವುದು ಒಂದು ವಿಶ್ವವ್ಯಾಪಿ ಕುಟುಂಬ. ಈ ಕುಟುಂಬದಲ್ಲಿ ಸಾವಿರಾರು ಸಮುದಾಯಗಳಿವೆ. ನೂರಾರು ಸಂಸ್ಕೃತಿ, ಭಾಷೆ, ಆಚರಣೆ ಮತ್ತು ನಂಬಿಕೆಯ ಜನರಿದ್ದಾರೆ. ಇವರ ಆಚರಣೆಗಳಲ್ಲಿ ಏಕರೂಪತೆ ಇಲ್ಲದಿರಬಹುದು! ಆದರೆ ನಂಬಿಕೆಗಳು ಮಾತ್ರ ಏಕತೆಯನ್ನು ದೃಢೀಕರಿಸುತ್ತವೆ. ಇವರೆಲ್ಲರ ಏಕನಿಷ್ಠೆ ಮಣ್ಣಿಗೆ ಮಾತ್ರ. ಉಳಿದೆಲ್ಲವೂ ಆಯಾ ಕಾಲ ಮತ್ತು ದೇಶಗಳಿಗೆ ಸಂಬಂಧಪಟ್ಟ ವ್ಯಾಖ್ಯೆಗಳು. ಅವರ ಆಚರಣೆ ಮತ್ತು ನಂಬಿಕೆಗಳು ಕೃಷಿ ಬದುಕಿನ ಬಗ್ಗೆ, ಅವರಿಗಿರುವ ಜ್ಞಾನವನ್ನು ಹೊಳೆಯಿಸುತ್ತವೆ. ಆದ್ದರಿಂದ ಸಮಾಜಶಾಸ್ತ್ರಜ್ಞರು ಕೃಷಿಯನ್ನು 'ಆದಿಮ ವಿಜ್ಞಾನ' ಎಂದು ಹೇಳುತ್ತಾರೆ (primitive science).

ತನಗೆ ತಾನೇ ಫಲವತ್ತಾಗುವ ಮಣ್ಣಿನ ಗುಣವನ್ನು ಒತ್ತಾಯದಿಂದ ಬದಲು ಮಾಡುವ, ನದಿ ಪಾತ್ರಗಳನ್ನು ತಮಗೆ ಬೇಕೆಂದೆಡೆಗೆ ಎಳೆದೊಯ್ಯುವ ಆಧುನಿಕ ನಾಗರಿಕತೆಯ ವಿಕೃತ ಕಾರ್ಯಗಳು ಇಂದು ಕೃಷಿಕರನ್ನು ಕಂಗಾಲಾಗಿಸಿವೆ. ಮಣ್ಣು ಕೃಷಿಕ ಸಂಸ್ಕೃತಿಯ ಜೀವಾಳ. ಮಣ್ಣು ಮತ್ತು ನೀರಿನ ಸುತ್ತಲೂ ಕೃಷಿ ಜ್ಞಾನ ಹೆಣೆದುಕೊಂಡಿದೆ. ಈ ಸಾವಯವ ಸಂಬಂಧವನ್ನು ತುಂಡರಿಸಿದರೆ ಇಡೀ ಮನುಕುಲವೇ ಶರಶಯ್ಯೆಯಲ್ಲಿ ಮಲಗುತ್ತದೆ ಎಂಬುದನ್ನು ಮರೆಯಬಾರದು.

ಭೂಮಿ ಇಂದು 'ಅಭಿವೃದ್ಧಿ' ಎನ್ನುವ ರೋಗದ ಪ್ರಯೋಗಶಾಲೆಯಂತಾಗಿದೆ. ಧಗಧಗಿಸುವ ಉರಿಯ ಜ್ವಾಲೆಯ ಮೇಲೆ ಭೂಮಿ ನಿಂತಿದೆ. ಇದರಿಂದಾಗಿ ಭೂಮಿಯ ತಾಪಮಾನ ಇಂದು ಹೆಚ್ಚಾಗುತ್ತಿದೆ ಎಂದು ಜಗತ್ತಿನ ಎಲ್ಲ ವಿಜ್ಞಾನಿಗಳು ಒಕ್ಕೊರಲಿನಿಂದ ನಮ್ಮನ್ನು ಎಚ್ಚರಿಸುತ್ತಿದ್ದಾರೆ. ಇದನ್ನೇ 'ನಾಗರಿಕತೆ ಒಂದು ರೋಗ' ಎಂದು ಗಾಂಧೀಜಿ ಬಹು ಹಿಂದೆಯೇ ಹೇಳಿದ್ದರು. ಇದೇ ಮಾತುಗಳನ್ನು ಇಂದು ಗ್ರೇಥಾ ಥನ್ಸ್ ಬರ್ಗ್ ಎಂಬ ಪುಟ್ಟ ಶಾಲಾ ಬಾಲಕಿಯೊಬ್ಬಳು ನಮ್ಮೆಲ್ಲರ ಮುಂದೆ ನಿಂತು '**How dare you?....**' ಎಂದು ಕೇಳುತ್ತಿದ್ದಾಳೆ. ಈ ಮಾತುಗಳು ಉರಿಯುತ್ತಿರುವ ಭೂಮಿತಾಯಿಯೇ ಎದ್ದುನಿಂತು ನಮ್ಮನ್ನು ಕೇಳುತ್ತಿರುವಂತಿದೆ.

ವಿಕೃತ ಚಿಂತನೆಗಳ ನಡುವೆಯೇ ಭೂಮಿಯನ್ನು ಪೂಜಿಸುವ ನಿಷ್ಕಳಂಕ ನಡಾವಳಿಗಳು ನಮ್ಮ ಕೃಷಿ ಸಂಸ್ಕೃತಿಯಲ್ಲಿವೆ. ಕೊಡವರು ಆಚರಿಸುವ 'ಹುತ್ತರಿ', ಮಲೆನಾಡಿನ ಭಾಗದಲ್ಲಿ ಆಚರಿಸುವ 'ಭೂಮಿ ಹುಣ್ಣಿಮೆ', ಉತ್ತರ ಕರ್ನಾಟಕದ ಪ್ರಸಿದ್ಧವಾದ 'ಎಳ್ಳು ಅಮಾವಾಸ್ಯೆ', ಮೈಸೂರು ಸೀಮೆಯ ಸುತ್ತಮುತ್ತ ಇರುವ 'ಅಚ್ಚು' ತೆಗೆಯುವ ಆಚರಣೆ ಹಾಗೂ ಕಾಡುಗೊಲ್ಲರು ಹಟ್ಟಿಗಳಲ್ಲಿ ಆಚರಿಸುವ 'ಹಾಲರವಿ ಹಬ್ಬ' (ಹಾಲು ಹುಯ್ಯೋ ಹಬ್ಬ). ಇವೆಲ್ಲವೂ ಫಲವಂತಿಕೆ ಮತ್ತು ಸಮೃದ್ಧಿಯ ಸಂಕೇತವಾದ ಭೂಮಿತಾಯಿಯನ್ನು ಆರಾಧಿಸುವ ಆಚರಣೆಗಳು. ಇವೆಲ್ಲವೂ ನಮ್ಮ ಕಣ್ಣುಗಳಿಗೆ ಅತಿ ಸಮೀಪವಿರುವ ಕೃಷಿ ಬದುಕಿನ ಮೇಲೆ ನಿರ್ಮಿಸಲಾಗಿರುವ ಲೋಕ ಕಾರುಣ್ಯದ ಆಚರಣೆಗಳು.

ರೋಹಿಣಿ ನಕ್ಷತ್ರದ ಹುಣ್ಣಿಮೆಯ ದಿನ ಶ್ರದ್ಧೆ ಮತ್ತು ಸಂತಸದಿಂದ ಕುಟುಂಬದವರೆಲ್ಲ ಭತ್ತದ ಗದ್ದೆಗೆ ಹೋಗಿ, ಮನೆಗೆ ಹೊಂಬಣ್ಣದ 'ಕದಿರು' (ಭತ್ತದ ತೆನೆ) ಕೊಯ್ದು ತರುವ ಆಚರಣೆ 'ಹುತ್ತರಿ'. ಹೊಸ ಅಕ್ಕಿಯನ್ನು ಮನೆಗೆ ತರುವ ಹಬ್ಬವೇ 'ಹುತ್ತರಿ'. ಮಲೆನಾಡಿನ ಭಾಗದಲ್ಲಿ ನವರಾತ್ರಿ ಹಾಗೂ ದೀವಳಿಗೆಯ ನಡುವೆ ಬರುವ ಹುಣ್ಣಿಮೆಯಲ್ಲಿ ಆಚರಿಸುವುದೇ 'ಭೂಮಿ ಹುಣ್ಣಿಮೆ'. ಹುಣ್ಣಿಮೆಯ ದಿನ ಸಿದ್ಧಗೊಂಡ ಬಾಳೆಯ ಮಂಟಪವನ್ನು ಕಾಡುಹೂವು ಮತ್ತು ಅಕ್ಕತಂಗಿಯರ ಹೂವಿನಿಂದ ಸಿಂಗರಿಸಿ, ಭೂಮಿಯನ್ನು ಮುತ್ತೈದೆ ಎಂದು ಭಾವಿಸಿ, ಅರಿಶಿನ–ಕುಂಕುಮ, ಬಳೆ ಇಟ್ಟು ಕಂಕಣ ಕಟ್ಟಿ ಪೂಜಿಸುವ ಸಂಪ್ರದಾಯವಿದೆ. ಉತ್ತರ ಕರ್ನಾಟಕದ ಭಾಗದಲ್ಲಿ 'ಎಳ್ಳು ಅಮವಾಸ್ಯೆ' ದಿನ ಮನೆಮಂದಿಯೆಲ್ಲ ಕೂಡಿ, ಹೊಲದಲ್ಲಿನ ಬೆಳೆಯನ್ನು ಹಸುರು ಸೀರೆ, ರವಿಕೆಯಿಂದ ಸಿಂಗರಿಸಿ, ಆ ದಿನದ ಅಡುಗೆಯನ್ನು ಎಡೆಯಿಟ್ಟು ಪೂಜಿಸುತ್ತಾರೆ. ತಮ್ಮ ತಮ್ಮ ಹೊಲಗಳ ಸುತ್ತೆಲ್ಲಾ 'ಚರಗ' ಚೆಲ್ಲಿ ಊರಿಗೆ ಒಳಿತಾಗಲೆಂದು ಪ್ರಾರ್ಥಿಸುತ್ತಾರೆ.

ಕಾಡುಗೊಲ್ಲರ 'ಹಾಲು ಹುಯ್ಯುವ ಹಬ್ಬ'ದ ಆಚರಣೆಯಂತೂ ಹೆಚ್ಚು ಭಾವನಾತ್ಮಕವಾಗಿರುತ್ತದೆ. 'ಹಾಲರವಿ' ಹಬ್ಬದ ಹಿಂದಿನ ದಿನದಂದು ದನ, ಕುರಿಗಳಿಂದ ಹಾಲು ಕರೆದು ಯಾರಿಗೂ ಸೋಕದಂತೆ ಕಾಯಿಸಿಟ್ಟಿರುತ್ತಾರೆ. ಹಬ್ಬದ ದಿನದಂದು ಉಪವಾಸವಿದ್ದು, ಹಟ್ಟಿಯ ದೇವರ ಗುಬ್ಬದ ಮುಂದೆ ಹೊಲದಲ್ಲಿರುವ ಎಲ್ಲ ಬಗೆಯ ಹೂವುಗಳನ್ನು ತಂದು, ಅದನ್ನು ಸಗಣಿ ಕಟ್ಟೆ ಕಟ್ಟಿ ಅಲಂಕರಿಸುತ್ತಾರೆ. ಅಲಂಕರಿಸಿದ ಕಟ್ಟೆಯ ಸುತ್ತಲೂ ಬವನಾಸಿ ಮತ್ತು ಸೋರೆಗಳನ್ನು ಇಟ್ಟು ಅದರಲ್ಲಿ ಹಟ್ಟಿಯವರು ಹಾಲಿನ ಮೊಗೆಗಳಲ್ಲಿ ತಂದ ಹಾಲನ್ನು ಭೂಮಿತಾಯಿಯ ಒಡಲಿಗೆ ಸುರಿದು ಪೂಜಿಸುತ್ತಾರೆ.

ಆಧುನಿಕ ಕೃಷಿಕ ಕವಿ ಮಧುರ ಚೆನ್ನರು ಭೂಮಿಯನ್ನು ನುಡಿಮಾಲೆಯಲ್ಲಿ ಹೀಗೂ ಆರಾಧಿಸಿದ್ದಾರೆ:

ಚಂದರನ ಚೆಲುವಿಕೆ ಇಂದರನ ಹೋಲಿಕೆ ಮೈ ಹಿಂಗ ನಿನ್ನ ಮನ ಹ್ಯಾಂಗ! ಎಳಮಾವು ಮಲಗಿರುವ ತಾಯಿ ಪೃಥಿವೀ.

ಭೂಮಿಯನ್ನು ಮೈದಡವಿ ಸಂತೈಸುವ ಈ ಆಚರಣೆಗಳೆಲ್ಲಾ ಧನಾತ್ಮಕವಾದವು. ಜೀವ ರಾಶಿಗಳಿಗೆ ಕೇಡು ಬಾರದಿರಲೆಂದು ಪ್ರಾರ್ಥಿಸುವ ಈ ಆಚರಣೆಗಳು ಸಾಮೂಹಿಕ ಒಳಿತನ್ನು ಬಯಸುತ್ತವೆ. ಭೂಮಿಗೆ ಕೃತಜ್ಞರಾಗಿರುವುದು ಎಂದರೆ ಹೀಗೆಯೇ ಅಲ್ಲವೆ! ಇಂತಹ ಜೀವಪರ ಆಚರಣೆಗಳನ್ನೆಲ್ಲಾ 'ಮೂಢನಂಬಿಕೆಗಳು' ಎಂದು ನಮ್ಮ ಶಿಕ್ಷಿತ ಜಗತ್ತು ತೀರ್ಮಾನಿಸಿಬಿಟ್ಟಿದೆ! ಒಂದು ತುತ್ತು ಅನ್ನಕ್ಕಾಗಿ ಮಣ್ಣನ್ನು ಮಾರಿಕೊಳ್ಳುವ 'ಅಭಿವೃದ್ಧಿ'ಯ ನೇತಾರರು, ಅಧ್ಯಾತ್ಮಿಕ ವೇಷದಲ್ಲಿರುವ ಸೋಗಲಾಡಿಗಳು ಕೃಷಿಕರ ಈ ಆಚರಣೆಗಳನ್ನು ನೋಡಿ ಕಲಿಯಬೇಕಾಗಿದೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಜನರಿಗೆ ಹಿರಿಯರಿಂದ ಬರುವ ಆಭರಣಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.

  —ಬಿ.ಎಂ.ಶ್ರೀ.

- ನಾವೀಗ ಸ್ವತಂತ್ರರಾಗಿದ್ದೇವೆ. ದೇಶ ಹಾಳಾದರೆ ಇನ್ನು ನಮ್ಮಿಂದಲೇ ಹಾಳಾಗಬೇಕೇ ಹೊರತು ಹೊರಗಿನವರಿಂದಲ್ಲ.

  —ದ.ರಾ. ಬೇಂದ್ರೆ

- ಜನ ತಾವು ಅರ್ಥಮಾಡಿಕೊಂಡಿರುವ ಸಂಗತಿಗಳ ಬಗ್ಗೆ ಮಾತ್ರ ಮಾತನಾಡುವಂತಾದರೆ, ಭೂಮಿ ಅತ್ಯಂತ ಶಾಂತವಾದ ಸ್ಥಳವಾಗಿರುತ್ತದೆ.

  —ಆಲ್ಬರ್ಟ್ ಐನ್‌ಸ್ಟೀನ್

- ಹಣದ ಆರಾಧನೆ ಮತ್ತು ಯಶಸ್ಸಿನ ಬೇಟೆಯೇ ನಮ್ಮ ಅವನತಿಗೆ ಕಾರಣ. ಈ ದೋಷಗಳು ತುಂಬಿರುವ ಸಮಾಜದಲ್ಲಿ ತಿರುಳು ಕಂತುತ್ತದೆ. ಜೊಳ್ಳು ತೇಲುತ್ತದೆ.

  —ಶಿವರಾಮ ಕಾರಂತ

- ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳವಳಿಗಳನ್ನು ಜೀವಂತವಾಗಿ ಇಟ್ಟಿರುವುದು ಅತ್ಯಗತ್ಯ.

  —ಕುವೆಂಪು